**ಚನ್ನಪಟ್ಟಣದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚನ್ನಪಟ್ಟಣ**

**ಸಿ.ಸಿ. ಸಂಖ್ಯೆ: 494/2022**

ಫಿರ್ಯಾಧಿದಾರರು : ಎಂ ಕೆ ದೊಡ್ಡಿ ಪೊಲೀಸ್ ಠಾಣೆ

-- ವಿರುದ್ಧ--

ಆರೋಪಿತರು : 1. ನಾಗರಾಜು ಬಿನ್ ಲೇಟ್ ಮರಳುಸಿದ್ದಯ್ಯ,
45 ವರ್ಷ, ವಾಸ: ಬೇವೂರು ಗ್ರಾಮ,
ಮಳೂರು ಹೋಬಳಿ,
ಚನ್ನಪಟ್ಟಣ ತಾಲ್ಲೂಕು,
ರಾಮನಗರ ಜಿಲ್ಲೆ.

ದೋಷಾರೋಪಣೆ

ಶ್ರೀ.ವೆಂಕಟೇಶಪ್ಪ ವಿ., ಬಿ.ಎ., ಎಲ್.ಎಲ್.ಬಿ., ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಚನ್ನಪಟ್ಟಣ.

ದಿ: 10.02.2022 ರಂದು ಸಂಜೆ 7.30 ಗಂಟೆ ಸಮಯದಲ್ಲಿ ಎಂ ಕೆ ದೊಡ್ಡಿ ಪೊಲೀಸ್ ಠಾಣಾ ಸರಹದ್ದು, ಬೇವೂರು ಗ್ರಾಮದ ಚಾಸಾ 1 ಮತ್ತು 2 ರವರು ತಮ್ಮ ಹಿಂಭಾಗದ ಮನೆಯಲ್ಲಿ ಸೈಟಿನಲ್ಲಿದ್ದ ಜೇನು ಕಿತ್ತಿರುವ ವಿಚಾರವಾಗಿ ಮಾತನಾಡುತ್ತಾತ್ತಿದ್ದಾಗ ಆರೋಪಿಯಾದ ನೀವು ಚಾಸಾ 1 ಮತ್ತು 2 ರವರ ಮನೆಗೆ ಏಕಾಏಕಿ ನುಗ್ಗಿ ಅಕ್ರಮ ಪ್ರವೇಶ ಮಾಡಿರುತ್ತೀರಿ. ಆದಕಾರಣ ನೀವು ಭಾ.ದಂ.ಸಂ. ಕಲಂ.448 ಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

2. ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ, ಆರೋಪಿಯಾದ ನೀವು, ಚಾಸಾ 1 ರವರ ಮೈ ಮೇಲೆ ಕೈಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆದಕಾರಣ ನೀವು ಭಾ.ದಂ.ಸಂ. ಕಲಂ.323 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

3. ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ, ಆರೋಪಿಯಾದ ನೀವು, ಚಾಸಾ 1 ಮತ್ತು 2 ರವರ ಮೈ ಮೇಲೆ ಕೈಗಳಿಂದ, ಗೊದಮೊಟ್ಟೆಯಿಂದ ಹೊಡೆದು ರಕ್ತಗಾಯಪಡಿಸಿ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿರುತ್ತೀರಿ. ಆದಕಾರಣ ನೀವು ಭಾ.ದಂ.ಸಂ. ಕಲಂ.324 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

4. ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ, ಆರೋಪಿತಯಾದ ನೀವು, ಚಾಸಾ 1 ರವರಿಗೆ ತೆಂಗಿನ ಗೊದಮೊಟ್ಟೆಯಿಂದ ಮೂಗಿನ ಮೇಲೆ ಹೊಡೆದು ತೀವ್ರ ಸ್ವರೂಪದ ರಕ್ತಗಾಯವನ್ನುಂಟು ಮಾಡಿರುತ್ತೀರಿ. ಆದಕಾರಣ ನೀವು ಭಾ.ದಂ.ಸಂ. ಕಲಂ.326 ರ ಅನ್ವಯ ಶಿಕ್ಷಾರ್ಹ ಅಪರಾಧ ಮಾಡಿದ್ದೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

5. ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ, ಆರೋಪಿಯಾದ ನೀವು, ಚಾಸಾ 1 ಮತ್ತು 2 ರವರಿಗೆ ಸೈಟಿನ ವಿಚಾರಕ್ಕೆ ಬಂದರೆ ನಿಮಗೊಂದು ಗತಿಯನ್ನು ಕಾಣಿಸುತ್ತೇವೆಂದು ಪ್ರಾಣ ಬೆದರಿಕೆಹಾಕಿರುತ್ತೀರಿ. ಆದಕಾರಣ ನೀವು ಭಾ.ದಂ.ಸಂ. ಕಲಂ.506 ಸಹವಾಚಕ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

6. ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ, ಆರೋಪಿಯಾದ, ನೀವು ಚಾಸಾ 1 ರವರನ್ನು ಬಿಡಿಸಿಕೊಳ್ಳಲು ಚಾಸಾ 2 ರವರು ಬಂದಾಗ ಸೂಳೆ ಮುಂಡೆ, ಏನೋ ಬೋಳಿ ಮಗನೇ , ಸೂಳೆ ಮಗನೇ , ನಿಮ್ಮ ಅಪ್ಪನ ಜಮೀನಾ ಏನೋ ಸೂಳೆ ಮಗನೆ ಎಂದು ಬೈದು ಇದು ನನ್ನ ಜಮೀನು, ಎಂದು ಅವಾಚ್ಯ ಶಬ್ದಗಳಿಂದ ಆದಕಾರಣ ನೀವು ಭಾ.ದಂ.ಸಂ. ಕಲಂ.504 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

7. ಅದೇ ದಿನ, ಅದೇ ಸ್ಥಳ ಮತ್ತು ಅದೇ ಸಮಯದಲ್ಲಿ, ಆರೋಪಿಯಾದ, ನೀವು ಚಾಸಾ 2 ರವರಿಗೆ ಚಪ್ಪಲಿಯಿಂದ ಹೊಡೆದು ಮಾನಕ್ಕೆ ಕುಂದು ಉಂಟಾಗುವಂತೆ ವರ್ತಿಸಿರುತ್ತೀರಿ. ಆದಕಾರಣ

ನೀವು ಭಾ.ದಂ.ಸಂ. ಕಲಂ.355 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತೀರಿ.

(ಈ ಮೇಲಿನ ಆರೋಪಣೆಯನ್ನು ಆರೋಪಿತರಿಗೆ ತಿಳಿದ ಭಾಷೆಯಲ್ಲಿ ಓದಿ ಹೇಳಲಾಯಿತು)

ದಿನಾಂಕಃ

( ವೆಂಕಟೇಶಪ್ಪ ವಿ. )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಚನ್ನಪಟ್ಟಣ.

ಚನ್ನಪಟ್ಟಣದ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಚನ್ನಪಟ್ಟಣ

ಸಿ.ಸಿ. ಸಂಖ್ಯೆ: **494/2022**

ಪಿರ್ಯಾದುದಾರರು - ವಿರುದ್ಧ - ಆರೋಪಿತ
ಎಂ ಕೆ ದೊಡ್ಡಿ ಪೊಲೀಸ್ ಠಾಣೆ ಎ 1. ನಾಗರಾಜು .

ಆರೋಪಿಯ ಹೇಳಿಕೆ

ಪ್ರಶ್ನೆ:1. ನಿಮ್ಮ ಮೇಲೆ ಮಾಡಿರುವ ದೋಷಾರೋಪಣೆಗಳನ್ನು ಕೇಳಿ ಅರ್ಥಮಾಡಿಕೊಂಡಿರುವಿರಾ?

ಉತ್ತರ: ಎ 1.

ಪ್ರಶ್ನೆ:2. ನೀವು ಮೇಲ್ಕಂಡ ದೋಷಾರೋಪಣೆಯನ್ನು ಒಪ್ಪಿಕೊಳ್ಳಲು ಇಚ್ಛಿಸುವಿರಾ ಅಥವಾ ನ್ಯಾಯಾಲಯದ ವಿಚಾರಣೆ ಆಗಬೇಕೆಂದು ಕೇಳುವಿರಾ?

ಉತ್ತರ: ಎ 1.

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತನಿಗೆ ಓದಿ ಹೇಳಿ ಅದನ್ನು ಅರ್ಥೈಸಿಕೊಂಡು ನನಗೆ ನೀಡಿದ ಉತ್ತರವನ್ನು ನಮೂದಿಸಿಕೊಳ್ಳಲಾಯಿತು ಮತ್ತು ಈ ಒಂದು ದೋಷ ವಾದಪತ್ರವು ಸತ್ಯವಾಗಿ ಮತ್ತು ಸಂಪೂರ್ಣವಾಗಿ ಆರೋಪಿತರು ನೀಡಿದ ಹೇಳಿಕೆಯನ್ನು ಒಳಗೊಂಡಿದೆಯೆಂದು ಧೃಢೀಕರಿಸುತ್ತೇನೆ.)

ದಿನಾಂಕ:

( ವೆಂಕಟೇಶಪ್ಪ ವಿ.)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಚನ್ನಪಟ್ಟಣ.